| | | |
|---|---|---|
| 4. | ಕೋಲಾರ | ಗುಡಿಬಂಡೆ |
| 5. | ಶಿವಮೊಗ್ಗ | ಶಿಕಾರಿಪುರ |
| 6. | ಚಿಕ್ಕಮಂಗಳೂರು | ಶೃಂಗೇರಿ |
| 7. | ದಕ್ಷಿಣ ಕನ್ನಡ ಜಿಲ್ಲೆ | ಬಂಟ್ವಾಳ, ಮಂಗಳೂರು, ಸುಳ್ಯ |
| 8. | ಹಾಸನ | ಬೇಲೂರು, ಸಕಲೇಶಪುರ |
| 9. | ಕೊಡಗು | ಮಡಿಕೇರಿ, ವಿರಾಜಪೇಟೆ |
| 10. | ಮಂಡ್ಯ | ಪಾಂಡವಪುರ |
| 11. | ಮೈಸೂರು | ಹೆಚ್.ಡಿ.ಕೋಟೆ, ಕೃಷ್ಣರಾಜನಗರ |
| 12. | ಉಡುಪಿ | ಕಾರ್ಕಳ, ಉಡುಪಿ |
| 13. | ಬಳ್ಳಾರಿ | ಶಿರಗುಪ್ಪ |
| 14. | ಗುಲ್ಬರ್ಗಾ | ಅಫ್ಜಲ್‌ಪುರ, ಚಿಂಚೋಳಿ, ಸೇಡಂ |
| 15. | ಕೊಪ್ಪಳ | ಗಂಗಾವತಿ |
| 16. | ಬಿಜಾಪುರ | ಮುದ್ದೇಬಿಹಾಳ |
| 17. | ಬಾಗಲಕೋಟೆ | ಬಿಳಗಿ |
| 18. | ಧಾರವಾಡ | ಕಲಘಟಗಿ, ಕುಂದಗೋಳ, ನವಲಗುಂದ. |

**2673 (2637) ಶ್ರೀ ಮಲ್ಲಿಕಾರ್ಜುನ್ ಸಿದ್ಧರಾಮಪ್ಪ ಖೂಬ (ಬಸವಕಲ್ಯಾಣ) :-** ಮಾನ್ಯ ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಡಿಯಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಜಮೀನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ;

ಆ) ಎಷ್ಟು ಜಮೀನು ಹಂಚಿಕೆಗೆ ಬಾಕಿ ಇದೆ ಹಾಗೂ ಭೂಸ್ವಾಧೀನಪಡಿಸಿಕೊಂಡ ಬಗ್ಗೆ ಮಾಜಿ ಭೂಮಾಲೀಕರಿಗೆ ಪರಿಹಾರ ನೀಡಲಾಗಿದೆಯೇ;

ಇ) ನೀಡಲಾಗದಿದ್ದರೆ ಎಷ್ಟು ನೀಡಲಾಗಿದೆ;

ಈ) ಕೈಗಾರಿಕಾಭಿವೃದ್ಧಿ ಯೋಜನೆಯಡಿಯಲ್ಲಿ ರಾಜ್ಯದ ಹಿಂದುಳಿದ ಜಿಲ್ಲೆಯಾದ ಬೀದರ್ ಜಿಲ್ಲೆಯ ಅಭಿವೃದ್ಧಿಗಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಕೈಗಾರಿಕಾ ಸ್ಥಾಪನೆಗೆ ಯಾವ ರೀತಿ ಪ್ರೋತ್ಸಾಹ ನೀಡಲಾಗುತ್ತಿದೆ;

ಉ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಸಬ್ಸಿಡಿ ನೀಡುವುದು ಹಾಲಿ ಸ್ಥಿತಿಯಲ್ಲಿ ಸಾಲ ಪೂರ್ತಿ ಮರುಪಾವತಿಯಾಗುತ್ತಾ ಬಂದರೂ ಕೈಗಾರಿಕಾ ಇಲಾಖೆ ಇಲ್ಲಿಯವರೆಗೆ ಸಬ್ಸಿಡಿ ಮಂಜೂರಿಸಿರುವುದಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಬಂದಿದ್ದಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗುತ್ತಿದೆ?

**ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :**

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಡಿಯಲ್ಲಿ ರಾಜ್ಯದಲ್ಲಿ ಒಟ್ಟು 58,763 ಎಕರೆ 36 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ರಾಜ್ಯಾದ್ಯಾಂತ ಕೈಗಾರಿಕಾ ಪ್ರದೇಶಗಳಲ್ಲಿ 6235 ಎಕರೆ 12 ಗುಂಟೆ ಜಮೀನು ಹಂಚಿಕೆಗೆ ಬಾಕಿ ಇದೆ. ಭೂ ಪರಿಹಾರಧನವನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಸಲಹಾ ಸಮಿತಿ ಸಭೆಯ ನಿರ್ಣಯದಂತೆ ಬಹುತೇಕ ಜಮೀನಿಗೆ ಒಪ್ಪಂದದ ದರದಲ್ಲಿ ಪರಿಹಾರ ಪಾವತಿಸಲಾಗಿದೆ. ಒಪ್ಪಂದದ ದರಕ್ಕೆ ಒಪ್ಪದ ಭೂಮಾಲೀಕರಿಗೆ ಮತ್ತು ವಿವಿಧ ನ್ಯಾಯಾಲಯಗಳಲ್ಲಿ ತಕರಾರು ಇರುವ ಪ್ರಕರಣಗಳಲ್ಲಿ ಭೂಸ್ವಾಧೀನ ಕಾಯ್ದೆಯಂತೆ ಸಾಮಾನ್ಯ ಐ ತೀರ್ಪು ರಚಿಸಿ ನ್ಯಾಯಾಲಯದಲ್ಲಿ ಪರಿಹಾರ ಹಣ ಠೇವಣಿ ಮಾಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) 2001–06ರ ಕೈಗಾರಿಕಾ ನೀತಿಯಂತೆ ಬೀದರ್ ಜಿಲ್ಲೆಯನ್ನು ಸಿ ಮತ್ತು ಡಿ ವಲಯಗಳಲ್ಲಿ ವಿಂಗಡಿಸಲಾಗಿದ್ದು ಕೈಗಾರಿಕಾ ಸ್ಥಾಪನೆಗೆ ಕೆಳಕಂಡಂತೆ ಪ್ರೋತ್ಸಾಹ ನೀಡಲಾಗುತ್ತಿದೆ.

1) ಸಿ ವಲಯದಲ್ಲಿ ಅತಿ ಸಣ್ಣ ಕೈಗಾರಿಕೆಗಳಿಗೆ ಸ್ಥಿರಾಸ್ತಿ ಮೌಲ್ಯದ ಶೇ.20ರಂತೆ ಗರಿಷ್ಟ ರೂ 10.00 ಲಕ್ಷಗಳಿಗೆ ಮಿತಿಗೊಳಿಸಿ ಸಹಾಯ ಧನವನ್ನು ನೀಡಲಾಗುತ್ತಿದೆ.

2) ಡಿ ವಲಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಸ್ಥಿರಾಸ್ತಿ ಮೌಲ್ಯದ ಮೇಲೆ ಶೇ.25 ರಂತೆ ರೂ. 12.50 ಲಕ್ಷಕ್ಕೆ ಮಿತಿಗೊಳಿಸಿ ಅಧಿಕ ಸಹಾಯಧನವನ್ನು ನೀಡಲಾಗುತ್ತಿದೆ.

3) ಇದಲ್ಲದೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಮಹಿಳಾ ಉದ್ಯಮಿಗಳಿಗೆ ಸ್ಥಿರಾಸ್ತಿ ಮೌಲ್ಯದ ಮೇಲೆ ಶೇ.5 ರಂತೆ ಗರಿಷ್ಟ ರೂ.1.00 ಲಕ್ಷಕ್ಕೆ ಮಿತಿಗೊಳಿಸಿ ಅಧಿಕ ಸಹಾಯ ಧನವನ್ನು ನೀಡಲಾಗುತ್ತಿದೆ.

4) ಸಿ ಮತ್ತು ಡಿ ವಲಯದಲ್ಲಿ ಕ್ರಮವಾಗಿ 5 ಮತ್ತು 8 ವರ್ಷಗಳಿಗೆ ಪ್ರವೇಶ ತೆರಿಗೆ ವಿನಾಯಿತಿ ಲಭ್ಯವಿರುತ್ತದೆ.

5) ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಗರಿಷ್ಟ 15 ದಿನಗಳವರೆಗೆ ಉದ್ಯಮಶೀಲತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

6) ಉದ್ಯಮಶೀಲತಾ ತರಬೇತಿ ಪಡೆದವರಿಗೆ ಕೈಗಾರಿಕೆ ಸ್ಥಾಪಿಸಲು ಪೂರ್ಣವಾಗಿ ಸಹಕಾರ ಮತ್ತು ಸರ್ಕಾರದಿಂದ ಬರುವ ಸವಲತ್ತುಗಳನ್ನು ಮಂಜೂರು ಮಾಡಲಾಗುವುದು.

ಉ) ಬಂದಿದೆ.

ಊ) ದಿನಾಂಕ :31-12-2004ರವರೆಗೆ 20226 ಘಟಕಗಳಿಗೆ ರೂ 356.05 ಕೋಟಿ ಸಹಾಯಧನ ಬಿಡುಗಡೆ ಬಾಕಿ ಇರುತ್ತದೆ. ಈ ಬಾಕಿಯನ್ನು ದಿನಾಂಕ : 1-1-99 ರಿಂದ ನೀಡಬೇಕಾಗಿದ್ದು, ಇದರಲ್ಲಿ ದಿನಾಂಕ : 1-1-99 ರಿಂದ 31-3-2003 ರವರೆಗೆ ಬೀದರ್ ಜಿಲ್ಲೆಯ 136 ಘಟಕಗಳಿಗೆ ಮಂಜೂರಾಗಿರುವ ಮೊತ್ತದಲ್ಲಿ ಶೇ.50 ರಂತೆ ರೂ.53.19 ಲಕ್ಷ ಬಿಡುಗಡೆ ಮಾಡಲಾಗಿದೆ. ಬೀದರ್ ಜಿಲ್ಲೆಯಲ್ಲಿ 571 ಘಟಕಗಳಿಗೆ 4.88 ಕೋಟಿ ಬಾಕಿ ಇರುತ್ತದೆ.

ಸರ್ಕಾರಿ ಆದೇಶ ದಿನಾಂಕ : 14-3-05ರ ಅನ್ವಯ ರೂ 65.00 ಕೋಟಿ ಸಹಾಯಧನ ಮಂಜೂರು ಮಾಡಲಾಗಿರುತ್ತದೆ. ಈ ಸಹಾಯಧನವನ್ನು ಸದ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು. ಉಳಿದ ಸಹಾಯಧನವನ್ನು 2005-06ನೇ ಸಾಲಿನಲ್ಲಿ ಹಾಗೂ ನಂತರ ಬಿಡುಗಡೆ ಮಾಡಲಾಗುವುದು.

**2676 (2977) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) :-** ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಹಿರೇಉಳ್ಳಗೇರಿ ಮತ್ತು ಸುತಗಟ್ಟಿ ಗ್ರಾಮಗಳಲ್ಲಿ ಗ್ರಾಮೀಣ ಪಶು ಚಿಕಿತ್ಸಾಲಯಗಳು, ಕಟ್ಟಡವಿಲ್ಲದೇ ಕಾರ್ಯ ನಿರ್ವಹಿಸಲು ಕಷ್ಟಕರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ ಈ ಕುರಿತು ಸರ್ಕಾರದ ಕ್ರಮ ಏನು?